JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಅಂಬಿಗರ ಚೌಡಯ್ಯನವರ ವಚನಗಳಲ್ಲಿ ಸಾಮಾಜಿಕ ವಿಡಂಬನೆ

ಡಾ. ಮಲ್ಲಿಕಾರ್ಜುನ ಪಿ. ಹುಲ್ಲೆ
ಕನ್ನಡ ಅತಿಥಿ ಉಪನ್ಯಾಸಕರು
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಕನ್ನಡ ಸಾಹಿತ್ಯ ಸುವರ್ಣಯುಗ, ಸಂಕ್ರಮಣಯುಗ, ವಚನಯುಗ ಹಾಗೂ ಬಸವಯುಗವೆಂದು ಕರೆಸಿಕೊಳ್ಳುವ ನಡುಗನ್ನಡ ಕಾಲ ಅತ್ಯಂತ ಮಹತ್ವಪೂರ್ಣವಾದುದಾಗಿದೆ. ಈ ಸಂದರ್ಭದಲ್ಲಿ ನಡೆದ ಸಾಮಾಜಿಕ ಬದಲಾವಣೆಗೆ ಅಂದಿನ ಶರಣರ ವೈಚಾರಿಕತೆಯು ಕಾರಣವಾಗಿದೆ. ಸುಮಾರು ಎಂಟುನೂರು ವರ್ಷಗಳ ಹಿಂದೆಯೇ ಸಮಾನತೆಯ ಬಗೆಗೆ ಚರ್ಚಿಸಿ ವರ್ಣ, ವರ್ಗ, ಲಿಂಗ ತಾರತಮ್ಯವನ್ನು ಹೋಗಲಾಡಿಸಿ ಸಮಾನತೆಯ ತಳಹದಿಯ ಮೇಲೆ ಕಟ್ಟಿದ ಅನುಭವ ಮಂಟಪ ಜ್ಞಾನದಾಸೋಹದ ಸಂಕೇತವಾಗಿ ಕಲ್ಯಾಣದಲ್ಲಿ ಬೆಳಗಿತು. ಜನಸಾಮಾನ್ಯರಿಗೆ ತಿಳಿಯುವಂತೆ ಸರಳವಾಗಿ ಆಡುಭಾಷೆಯಲ್ಲಿ ವಚನ ರಚಿಸಿ ಸರ್ವರಿಗೂ ಪ್ರೇರಣೆಯನ್ನಿತ್ತರು. ಈ ಸಂದರ್ಭದಲ್ಲಿ ಸಾಮೂಹಿಕ ಅಭಿವ್ಯಕ್ತಿಗೆ ಅವಕಾಶ ದೊರೆಯಿತು. ಶರಣರು ನುಡಿದಂತೆ ನಡೆದರು. ಅವರ ನಡೆ ನುಡಿ ಹೋರಾಟ ಒಂದೇ ಆಗಿದ್ದವು. ಆಚಾರ ಹಾಗೂ ವಿಚಾರಗಳೊಂದಾಗಿಸಿ ಬದುಕಿದ ವಚನಕಾರರ ಪ್ರಭಾವ ಜನಸಾಮಾನ್ಯರ ಮೇಲಾಯಿತು. ಶತಮಾನಗಳಿಂದ ಕೆಲವರಿಗೆ ಸೀಮಿತವಾಗಿದ್ದು, ಕೆಲವರ ಸೊತ್ತಾಗಿದ್ದ ಅಭಿವ್ಯಕ್ತಿ ಸಾಮಾನ್ಯ ಜನರೆಡೆ ಹರಿದು ಬಂದಿತು. ಈ ನಾಡಿನ ಚರಿತ್ರೆಯಲ್ಲಿ ಹಿಂದೆಂದೂ ಇಷ್ಟೊಂದು ಪ್ರಮಾಣದಲ್ಲಿ ಭಾಗವಹಿಸದ ಅಸ್ಪೃಶ್ಯ ಗುಂಪೊಂದು ತನ್ನನ್ನು ಸಮರ್ಥವಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿತು. ಕೆಳವರ್ಗದ ಶರಣರಿಂದ ಬಸವಾದಿ ಪ್ರಮಥರ ವಿಚಾರಗಳು, ತತ್ವಗಳು ಪ್ರಚಾರಕ್ಕೆ ಬಂದವು. ಇದಕ್ಕೆ ನಿದರ್ಶನವಾಗಿ ಡೋಹರ ಕಕ್ಕಯ್ಯ, ಮಡಿವಾಳ ಮಾಚಯ್ಯ, ಮೇದಾರ ಕೇತಯ್ಯ, ಮಾದಾರ ಚನ್ನಯ್ಯ, ಬಹುರೂಪಿ ಚೌಡಯ್ಯ, ನುಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯ, ಲಕ್ಕಮ್ಮ ಮತ್ತು ಅಂಬಿಗರ ಚೌಡಯ್ಯ ಮುಂತಾದ ಶರಣರ ಕಾಯಕ ಭಿನ್ನವಾಗಿದ್ದರೂ ಶಿವಭಕ್ತರಾಗಿ ಸಮಾನತೆ ಪಡೆದಿದ್ದರು.

ಅಂಬಿಗರ ಚೌಡಯ್ಯ ಅಂಕಿತದಲ್ಲಿರುವ 279 ವಚನಗಳನ್ನು ಇದುವರೆಗೆ ಸಂಗ್ರಹಿಸಿ ಸಂಪಾದಿಸಲಾಗಿದೆ. ಈ ವಚನಗಳ ಮೂಲಕ ಅಂಬಿಗರ ಚೌಡಯ್ಯನ ವ್ಯಕ್ತಿತ್ವವನ್ನು ಗುರುತಿಸಬಹುದಾಗಿದೆ. ವಚನಗಳಲ್ಲಿ ಗುರುಲಿಂಗ ಜಂಗಮ, ಕಾಯಕ, ದಾಸೋಹ, ಭಕ್ತಭವಿ ಸಮಾನತೆ ಹಾಗೂ ಮಾನವೀಯತೆ ಹೀಗೆ ಹಲವಾರು ವಿಷಯಗಳನ್ನು ಕುರಿತು ವಚನಗಳಲ್ಲಿ ಪ್ರಸ್ತಾಪಗೊಂಡಿವೆ.

ಚೌಡಯ್ಯನ ಕಾಲದಲ್ಲಿ ಆಚರಣೆಯಲ್ಲಿದ್ದ ಆರಾಧನೆ ಮೂಲ ಚೈತನ್ಯ ಸ್ವರೂಪವನ್ನು ತ್ಯಜಿಸಿ ಕೇವಲ ಮೂಢ ನಂಬಿಕೆಯಾಗಿ ಕಂಡಾಗ ಅದನ್ನು ಚೌಡಯ್ಯ ವಚನದಲ್ಲಿ ನೇರವಾಗಿ ಖಂಡಿಸುತ್ತಾನೆ.

> "ಅರಳಿಯ ಮರ ವಿಷ್ಣುಕಾಂತಿ ಬನ್ನಿ ಮುತ್ತಕ ತುಳಸಿ
> ಹರಿಹರಿಯೆಂದು ಹೊಡೆ ಹೊಮ್ಮುವಿರಿ ಎಲ್ಲ ಭೂ। ಎಲ್ಲಿಬೋ।
> ನಿಮ್ಮ ಹೊಡೆವಡುವ ದೈವಗಳೆಲ್ಲಾ ನಿಡಮರವಾಗಿ ಹೋದವಲ್ಲಾ
> ನಿಮ್ಮ ನಡೆಯೆಲ್ಲಿ ಅನಾಚಾರ ನುಡಿಯೆಲ್ಲ ಶಿವದ್ರೋಹ

ಇವದಿರ ಗಡಣ ಬೇಡೆಂದನಂಬಿಗರ ಚೌಡಯ್ಯ"

ಜನರು ಅಜ್ಞಾನದಿಂದಾಗಿ ಗಿಡಮರಗಳನ್ನು ಪೂಜಿಸುತ್ತಿರುವುದನ್ನು ಕಂಡು ವಿಡಂಬಿಸುತ್ತಾನೆ. ದೇವರು ಗಿಡ, ಮರ, ಕಲ್ಲು, ಮಣ್ಣುಗಳಲಿಲ್ಲ, ವಿನಾಕಾರಣ ಅವುಗಳನ್ನು ಪೂಜೆ ಮಾಡಿ ಹಾಳಾಗುತ್ತಿರುವಿರಿ ಎಂದು ಹೇಳುವುದರೊಂದಿಗೆ ಕಲ್ಲು ದೇವರನ್ನು ಪೂಜೆ ಮಾಡಿದವರು ಕಲಿಯುಗದ ಕತ್ತೆಗಳಾಗಿ ಹುಟ್ಟಿದರು. ಮಣ್ಣ ಪೂಜಿಸಿ ಮಣ್ಣ ಕೂಡಿದರು ದೇವರ ಪೂಜಿಸಿ ಸ್ವರ್ಗಕ್ಕೇರದೆ ಹೋದರು. ಜಗದ್ಭರಿತನಾದ ಪರಶಿವನೊಳಗೆ ಕಿಂಕರನಾದ ಶಿವಭಕ್ತನ ಶ್ರೇಷ್ಠನೆಂದಾತ ನಮ್ಮ ಅಂಬಿಗರ ಚೌಡಯ್ಯ ಎಂದು ಶಿವಭಕ್ತರ ಶ್ರೇಷ್ಠತೆಯನ್ನು ಎತ್ತಿ ಹೇಳುತ್ತಾನೆ. ಶಿವಭಕ್ತನಾದವನು ಮನದೊಳಗೊಂದು, ಹೊರಗೊಂದು ಇರಬಾರದು, ಆತ್ಮ ಶುದ್ಧಿಯಿಂದ ಅಚಲ ಶ್ರದ್ಧೆಯಿಂದ ಕೂಡಿರಬೇಕು. ಅಂತರಂಗ, ಬಹಿರಂಗ ಶುದ್ಧಿ ಸಾಧಿಸಿದವನೇ ಶಿವಭಕ್ತ. ಆತನಲ್ಲಿ ಮಾನವೀಯತೆ, ಮನುಷ್ಯತ್ವವಿರಬೇಕು ಅಂದರೆ ಶಿವಭಕ್ತನೆನಿಸಿಕೊಳ್ಳುವನು.

"ಕಟ್ಟಿಗೆಯ ಹೊರೆ ಹೊತ್ತು

ಬಟ್ಟೆಯಲ್ಲಿ ಬರುವ ಮಹೇಶ್ವರನ ಕಂಡು

ಆ ಹೇರಿಗೆ ತಲೆಯ ಕೊಟ್ಟವಂಗೆ ಪುಣ್ಯವಹುದು

ಆ ಭಕ್ತನ ಕಷ್ಟ ನಿಷ್ಟುರವನರಿಯದೆ

ಉದಾಸೀನ ಮಾಡುವ ಸಮಯ ಹೀನನ ಕೊರಳಲ್ಲಿ

ಶಿವಲಿಂಗವ ಕಟ್ಟಿರ್ದಡೇನಯ್ಯ

ಪಡೆವಲಕಾಯಿಗೆ ಕಲ್ಲು ಕಟ್ಟಿದಂತೆ"

ಪರರು ಕಷ್ಟದಲ್ಲಿದ್ದಾಗ ಸಹಾಯ ಮಾಡುವವ ನಿಜವಾದ ಶಿವಭಕ್ತನೆನಿಸಿಕೊಳ್ಳುತ್ತಾನೆ. ಬರೀ ವೇಷಹಾಕಿದ ಡಾಂಭಿಕರನ್ನು ಕಂಡು ಹೊಟ್ಟೆ ಹೊಯ್ದುಕೊಂಡು ನಗುತ್ತಾನೆ ಚೌಡಯ್ಯ.

ಬಸವಾದಿ ಪ್ರಮಥರು ಬಾಳಿ ಬದುಕಿದ ಅಂದಿನ ಸಮಾಜ ಸುವ್ಯವಸ್ಥಿತವಾದದ್ದೇನಲ್ಲ. ಹಲವಾರು ಅನಿಷ್ಟ ಪದ್ಧತಿಗಳಿಂದ ತತ್ತರಿಸಿದ ಅಂದಿನ ಸಮಾಜ ವ್ಯವಸ್ಥೆಯ ಚಿತ್ರಣ ಶರಣರ ವಚನಗಳಲ್ಲಿ ಕಾಣುತ್ತೇವೆ. ಅಸ್ಪೃಶ್ಯತೆ, ಮೂಢನಂಬಿಕೆ, ಲಿಂಗಭೇದ, ವರ್ಣಭೇದ ಇಂತಹ ಹಲವಾರು ಸಮಸ್ಯೆಗಳು ತುಂಬಿಕೊಂಡಿದ್ದವು. ಇಂಥ ಅವ್ಯವಸ್ಥಿತ ಸಮಾಜದ ವಿರುದ್ಧ ಹೋರಾಡುವುದು ಶರಣರಿಗೆ ಅನಿವಾರ್ಯವಾಗಿತ್ತು. ವಚನಕಾರರಲ್ಲಿ ಸಮಾಜವನ್ನು ವಿಡಂಬನೆಗೊಳಪಡಿಸಿದ ಶರಣರಲ್ಲಿ ಅಂಬಿಗರ ಚೌಡಯ್ಯ ಪ್ರಮುಖನೆನಿಸಿದ್ದಾನೆ. ಚೌಡಯ್ಯನ ಮೂಲಭೂತ ಉದ್ದೇಶ ಈ ಸಮಾಜದಲ್ಲಿರುವ ವೈರುಧ್ಯಗಳನ್ನು, ವೈಪರೀತ್ಯಗಳನ್ನು ಖಂಡಿಸುವುದಾಗಿತ್ತು. ಸಮಾಜ ಬದಲಾವಣೆಯಾಗಬೇಕು, ಮಾನವರಲ್ಲಿ ಸಮಾನತೆ ತಂದು ಮೇಲು–ಕೀಳು ಹೋಗಲಾಡಿಸಲು ಬಸವಣ್ಣನವರು ಕೆಳವರ್ಗದವರ ಮನೆಯಲ್ಲಿ ಊಟ ಮಾಡಿದರು. ಆದರೆ ಸಮಾಜದ ಅನೇಕರಿಗೆ ಈ ರೀತಿ ಮಾಡಲಿಕ್ಕಾಗಲಿಲ್ಲ. ನುಡಿದಂತೆ ನಡೆಯಲಿಕ್ಕಾಗಲಿಲ್ಲ. ಅಂದು ಸಮಾಜದಲ್ಲಿ ಇಂಥಹವರ ಸಂಖ್ಯೆ ಸಾಕಷ್ಟಿತ್ತು. ಚೌಡಯ್ಯ ಅದನ್ನು ಕಂಡಿದ್ದ. ವೈಚಾರಿಕ ಸಂಶೋಧಕನಂತೆ ಸಮಾಜವನ್ನು ವೀಕ್ಷಿಸಿ ಅಲ್ಲಿನ ಕುಂದುಕೊರತೆಗಳನ್ನು ವಚನಗಳ ಮೂಲಕ ತೆರೆದಿಟ್ಟಿದ್ದಾನೆ. ಯಾವುದೇ ವಚನಕಾರರಲ್ಲಿಯೂ ಆಳವಾಗಿ ತೀವ್ರವಾಗಿ ಕಂಡುಬರದ ಸಾಮಾಜಿಕ ಕಳಕಳಿ ಹೊಸ ಸಮಾಜ ರಚನೆಯ ಆಸಕ್ತಿಗಳು ಇವರ ವಚನಗಳಲ್ಲಿ ತುಂಬಿಕೊಂಡಿವೆ. ಚೌಡಯ್ಯ ಆ ಕಾಲದ ಹದಿನೆಂಟು ಕುಲಜಾತಿಗಳನ್ನು ಗಮನಿಸಿ ಇಂತಪ್ಪ ಕುಲ 18 ಜಾತಿ ನನ್ನ ಕುಲ ಹೆಚ್ಚು, ನಿನ್ನ ಕುಲ ಕಡಿಮೆ ಎಂದು ಹೊಡೆದಾಡುವಂತಹ ಅಣ್ಣಗಳನ್ನು ಹಿಡಿದು ತಂದು ಮೂಗನೆ ಸವರಿ ಮೆಣಸಿನ ಹಿಟ್ಟು ತುಪ್ಪವ ತುಂಬಿ ಎಡಪಾದುಕೆಯಿಂದ ಹೊಡೆಯಬೇಕೆನ್ನುತ್ತಾನೆ. ಏಕೆಂದರೆ ಕುಲ ಹಲವಾದರೇನು ಉತ್ಪತ್ತಿ ಸ್ಥಿತಿ ಒಂದೇ ಆಗಿರುವಾಗ ಎನ್ನುತ್ತಾನೆ. ಜಾತೀಯತೆ ತುಂಬಿದ ಅಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಚೌಡಯ್ಯ ಕುಲ ಜಾತಿಯ ಬಗೆಗೆ ತಾಳುವ ಬಂಡಾಯ ಮನೋಭಾವ ಗಮನಾರ್ಹವಾಗಿದೆ.

ವರ್ಣ ವ್ಯವಸ್ಥೆಯಲ್ಲಿ ಕೆಲವರನ್ನು ಊರ ಹೊರಭಾಗದಲ್ಲಿಟ್ಟು ಮುಟ್ಟಿಸಿಕೊಳ್ಳದಿರುವುದನ್ನು ಕಂಡು ಚೌಡಯ್ಯ ಊರು ಹೊರಗಿರುವವ ಹೊಲೆಯ ಅಲ್ಲ, ಹೊಲೆಯ ಊರೊಳಗಿದ್ದಾನೆ ಎಂಬ ಬಸವಣ್ಣನವರ ಮಾತನ್ನೇ ಚೌಡಯ್ಯನು ಆಕ್ರೋಶದಿಂದ ಹೇಳಿರುವನು.

“ಹೊಲೆಯ ಹೊಲೆಯ ಎಂದೆಡೆ ಹೊಲೆಯರೆಂತಪ್ಪಯ್ಯಾ

ಹೊಲೆಯ ಹೊರಕೇರಿಯಲ್ಲಿರುವನು

ಊರೊಳಗಿಲ್ಲವೇ ಅಯ್ಯಾ ಹೊಲೆಯರು

ತಾಯಿಗೆ ಬೈದವನೇ ಹೊಲೆಯ

ಕೊಡುವ ದಾನಕ್ಕೆ ಅಡ್ಡ ಬಂದವನೇ ಹೊಲೆಯ

ಜಗಳ ಬಂದಾಗ ನನ್ನ ಕುಲ ಹೆಚ್ಚು ನಿನ್ನ ಕುಲ ಹೆಚ್ಚು ಕಡಿಮೆ

ಎಂದು ಬಡಿದಾಡುವ ಕುನ್ನಿ ನಾಯಿಗಳ

ಮೂರೆ ಉರೆಯ ಮೇಲೆ ನಮ್ಮ ಪಡಿಹಾಕಿ ಉತ್ತಣ್ಣಗಳ

ವಾಮ ಪಾದುಕೆಯ

ಕೊಂಡು ಅವರ ಅಂಗುಳ ಮೆಚ್ಚಿ ಪಡೆ ಪಡೆನೆ ಹೊಡಿ ಎಂದಾತ

ನಮ್ಮ ದಿಟ್ಟ ಅಂಬಿಗರ ಚೌಡಯ್ಯ ನಿಜ ಶರಣನು”

ಹುಟ್ಟಿನಿಂದ ಯಾರೂ ಹೊಲೆಯರಾಗುವುದಿಲ್ಲ. ಹೀನ ಕಾರ್ಯ ಮಾಡುವವರು ನಿಜವಾದಂಥ ಹೊಲೆಯರೆಂದಿದ್ದಾನೆ ಚೌಡಯ್ಯ. ಅವರವರ ವೃತ್ತಿಯಿಂದ ಜಾತಿ ಬಂದಿದೆಯೇ ಹೊರತು, ಹುಟ್ಟಿನಿಂದಲ್ಲ. ಅವರು ಮಾಡುವ ಕೆಲಸಗಳೆಲ್ಲ ಉಪಯುಕ್ತವಾದುವೇ ಆಗಿವೆ. ಹರಿಗೋಲು, ಚಮ್ಮಾವುಗೆ, ಮಿಣಿ, ಮೃದಂಗ, ಬಾರುಕೋಲು ಇಂತಹ ಅನೇಕ ಅವಶ್ಯಕ ಉಪಯುಕ್ತ ವಸ್ತುಗಳನ್ನು ಸಿದ್ಧಪಡಿಸುವ, ಊರಿನಲ್ಲಿ ಕಸ ಗುಡಿಸಿ ಸ್ವಚ್ಛಗೊಳಿಸುವ, ಜನೋಪಯೋಗಿ ಕೆಲಸ ಮಾಡುವ ಇವರನ್ನು ಅಸ್ಪೃಶ್ಯರನ್ನಾಗಿ ಮಾಡಿದ್ದು ಈ ವ್ಯವಸ್ಥೆ ಹಾಗೂ ಈ ಸಮಾಜ. ಬಸವಣ್ಣವನರು ಹೇಳುವಂತೆ ಹೊಲಸು ತಿಂಬುವವನೇ ಹೊಲೆಯ, ಕೊಲ್ಲುವವನೇ ಮಾದಿಗ ಎಂದು ಜಾತಿ ಕುರಿತು ಸ್ಪಷ್ಟವಾದ ಪರಿಕಲ್ಪನೆ ಕೊಟ್ಟಿದ್ದಾನೆ.

ತನ್ನ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ಆಚರಣೆಯಲ್ಲಿರುವ ಹುಳುಕುಗಳನ್ನು ಕೈ ಮಾಡಿ ತೋರಿಸುವಲ್ಲಿ ಚೌಡಯ್ಯ ಹಿಂಜರಿಯುವುದಿಲ್ಲ. ಆಚರಣೆಯಲ್ಲಿರುವ ಕ್ರಿಯೆಗಳ ಮತ್ತು ಆಚರಿಸುವ ವ್ಯಕ್ತಿಗಳನ್ನು ಗೇಲಿ ಮಾಡುತ್ತಾನೆ. ಭಕ್ತ ಹಾಗೂ ಭವಿ ಎಂಬ ಎರಡು ವಿಚಾರಗಳಿದ್ದು ಏಕ ದೇವತಾ ಉಪಾಸನೆ ಮಾಡಬೇಕು. ಕಿರುದೈವಗಳಾದ ಮೈಲಾರ, ಭೈರವ, ದೂಳ ಕೇತ, ಮಾರಮ್ಮ, ದುರ್ಗಮ್ಮ, ಇಂಥಹ ದೈವಗಳೆಂದು ಪೂಜಿಸಬಾರದು. ಶಿವನನ್ನು ಪೂಜಿಸುವವನು ಭಕ್ತ ಶಿವನಲ್ಲದೇ ಅನ್ಯ ದೈವಗಳನ್ನು ಪೂಜಿಸುವವರು ಭವಿ ಎಂದು ಹೇಳುತ್ತ,

“ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ

ಕೊರಳಿಗೆ ಕವಡೆಯ ಕಟ್ಟಿ ನಾಯಾಗಿ ಬೊಗಳುವದು

ಅದಾವ ವಿಚಾರವಯ್ಯ

ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ

ಬೇವಿನುಡಿಗೆಯನುಟ್ಟು ಹಡಲಿಗೆಯ ಹೊತ್ತು

ಉಧೋ ಉಧೋ ಎಂಬರು”

ಸಕಲ ಶಾಸ್ತ್ರಗಳಲ್ಲಿ ಪರಿಣಿತರಾದ ನೀತಿ ಶಾಸ್ತ್ರಗಳನ್ನು ಅರಿತ ಪಂಡಿತರು ಪಾಪ ಪರಿಹಾರಕ್ಕಾಗಿ ಗಂಗೆಯಲ್ಲಿ ಮುಳುಗುವುದನ್ನು ಕಂಡು ಚೌಡಯ್ಯ ಅಪಹಾಸ್ಯ ಮಾಡಿದ್ದಾನೆ. ಚೌಡಯ್ಯ ಏಕದೇವೋಪಾಸಕ ಕಲ್ಲು, ಮಣ್ಣು, ಮರ ಇವುಗಳಿಂದ ಮಾಡಿದ ದೇವರುಗಳನ್ನು ಪೂಜಿಸದೇ, ಬಸವಾದಿ ಶರಣರೆಲ್ಲ ಒಪ್ಪಿದ ಜಗದ್ಭರಿತನಾದ ಶಿವನ ಇಷ್ಟಲಿಂಗವನ್ನು ಆರಾಧಿಸುವ ಈತನ ದೃಷ್ಟಿಯಲ್ಲಿ ಲಿಂಗ ಜಂಗಮವೇ ದೇವರು, ಬೇರಾವ ಜಡವಸ್ತುಗಳು ದೇವರಲ್ಲ. ಸಮಾಜದಲ್ಲಿ ಪೂಜ್ಯರೆನಿಸಿಕೊಂಡಿರುವ ಧರ್ಮಗುರುಗಳು, ಮಠಾಧೀಶರು ದುಡ್ಡಿನ ವ್ಯಾಮೋಹ ಹೊಂದಿರುವುದು ಸರಿಯಲ್ಲ. ಇಂಥಹ ಲೋಭಿಗಳನ್ನು ಚೌಡಯ್ಯ ತರಾಟೆಗೆ ತೆಗೆದುಕೊಂಡಿದ್ದಾನೆ. ಸಮಾಜದಲ್ಲಿ ಮಠಾಧೀಶರ ಸ್ಥಾನ ಗೌರವಾರ್ಹವಾದುದು. ಆತನೇ ಬಡವರಿಗೆ ಪ್ರತಿ ನಮಸ್ಕಾರ ಮಾಡದೇ ಶ್ರೀಮಂತರನ್ನು ಬನ್ನಿ ಹಿರಿಯರೇ ಎಂದು ಸ್ವತಃ ಆಮಂತ್ರಿಸುವ ರೀತಿ ಅವನ

ನೀಚತನವನ್ನು ತೋರಿಸುತ್ತದೆ. ಅಂಬಿಗರ ಚೌಡಯ್ಯ ಸಮಾಜದ ವಿಮರ್ಶಕ ಎಂಬುದರಲ್ಲಿ ಎರಡು ಮಾತಿಲ್ಲ. ಉಳಿದ ವಚನಕಾರರಿಗಿಂತ ಭಿನ್ನವಾದ ನಿಲುವು ಈತನದು. ಸಮಾಜದ ಲೋಕರೂಢಿಗಳನ್ನು ಪ್ರಶ್ನಿಸುವ ಎದೆಗಾರಿಕೆ ಆಚರಣೆಯಲ್ಲಿರುವ ಸಾಂಪ್ರದಾಯಿಕ ವೈರುದ್ಯಗಳನ್ನು ಗಮನಿಸುವ ಸೂಕ್ಷ್ಮ ದೃಷ್ಟಿ ವಿಶಿಷ್ಟವಾಗಿದೆ. ಚೌಡಯ್ಯ ಕೆಳ ಜಾತಿಯಲ್ಲಿ ಹುಟ್ಟಿ ಬೆಳೆದಿದ್ದರಿಂದ ಶೋಷಣೆಯ ತೀವ್ರತೆಯ ಅರಿವಿದೆ. ಹೀಗಾಗಿ ಸಮಾಜ ವ್ಯವಸ್ಥೆಯಲ್ಲಿ ಹತ್ತು ಹಲವು ಮೌಢ್ಯಾಚರಣೆಗಳನ್ನು ವಿರೋಧಿಸುತ್ತಾನೆ. ಚೌಡಯ್ಯನವರ ವಚನಗಳು ಪ್ರಸ್ತುತ ಕಾಲಮಾನಕ್ಕೂ ಅನ್ವಯವಾಗುತ್ತದೆ.

ಆಕರ ಗ್ರಂಥಗಳು:

1. ಬಸವಯುಗದ ವಚನ ಸಂಪುಟ–ಎಂ.ಎಂ. ಕಲಬುರ್ಗಿ
2. ವಚನಕಾರ ಅಂಬಿಗರ ಚೌಡಯ್ಯ–ಡಾ. ನಾಗಾಬಾಯಿ ಬಿ. ಬುಳ್ಳಾ.
3. ವಚನ ಸಾಹಿತ್ಯ–ಪ್ರೊ. ಅಶೋಕ ಎನ್. ಜೋಗೂರ.
4. ವಚನ ಕಾರಂಜಿ–ಸಂ. ಹಂಶಕವಿ